ಕೋಲಾರ ಡಿವೀಜ್.

ಇಸ್ತಿಹಾರ್ನಾಮೆ.

ಕೋಲಾರ, 8ನೆ ಏಪ್ರಿಲ್ 1907.

ತಾರೀಖು 11ನೆ ಏಪ್ರಿಲ್ 1907 ಇಸವಿ 2ನೆ ಭಾಗದ ಇಂಗ್ಲೀಷ್ ಮೈಸೂರು ಗೆಜೆಟ್ಟಿನಲ್ಲಿ ಘಾಯಿಷ್ ಮಾಡಿರತಕ್ಕ ಕೋಲಾರ ಡಿಸ್ಟ್ರಿಕ್ಟ್ ವಾಲೂರು ತಸಬೂದಲ್ಲಿ ಹೊಸದಾಗಿ ಆಂಗ್ಲೋ ವರ್ನಾಕ್ಯುಲರ್ ಸ್ಕೂಲ್ ಕಟ್ಟುತಕ್ಕ ಬಗ್ಗೆ ಟೆಂಡರ್ ವಿಷಯಕವಾದ ಇಸ್ತಿಹಾರ್ನಾಮೆಗೆ ಸಮಸ್ತ ಜನಗಳೂ ಗಮನಕೊಡತಕ್ಕದ್ದು.

ಕೆ. ಕೃಷ್ಣಯ್ಯಂಗಾರ್,
ಎಗ್ಜಿಕ್ಯೂಟೀವ್ ಇಂಜನಿಯರ್.

ಹಾಸನ ಡಿವೀಜ್.

ನೋಟಸ್.

ಈ ಕೆಳಗೆ ನಮೂದಿಸಿರುವ ಹಸರುಗಳಿಗೆ ಪ್ರತಿಯಾಗಿ ತೋರಿಸಿರುವ ಮೊಬಲಗು ಸದರಿ ಯಾವದಕ್ಕೆ ಮಾವತಿಯಾಗದೆ, ಈ ಆಫೀಸಿನ ಅಕೌಂಟ್ಸ್ ಡಿಪಾಜಿಟ್‌ನಲ್ಲಿ ಬಾಕಿ ನಿಂತಿರುತ್ತೆ. ಈ ನೋಟಿಸ್ ಘಾಯಿಷ್ಮಾದ ತಾರೀಖು ಲಾಗಾಯತು ಮೂರು ತಿಂಗಳೊಳಗಾಗಿ ಅಯಾಯ ಹಕ್ಕುದಾರರೇ ಆಗಲಿ ಅಥವಾ ಅವರು ವ್ಯತಪಟ್ಟಿದ್ದ ಪಕ್ಷದಲ್ಲಿ ಅವರ ನ್ಯಾಯವಾದ ಹಕ್ಕುದಾರರೇ ಆಗಲಿ ತಮ್ಮ ಹಕ್ಕುದಾರಿಕೆಯನ್ನು ಸ್ಥಾಪಿಸಿ ಸದರಿ ಮೊಬಲಗು ತಮಗೆ ಸಲ್ಲಬೇಕೆಂದು ತಿಳಿಸದಪಕ್ಷದಲ್ಲಿ ಅದು ಸರ್ಕಾರಕ್ಕೆ ಸೇರಿಸಲ್ಪಡುತ್ತೆ :—

ನಂ.	ಹೆಸರು.	ಸಲ್ಲಬೇಕಾದ ಮೊಬಲಗೆ ಅವರಿಂದ ಮಾಡಲ್ಪಟ್ಟ ಕೆಲಸಗಳು.	ಸಲ್ಲಬೇಕಾದ ಮೊಬಲಗು.
			ರೂ. ಆ. ಪೈ.
1	ವೆಂಕಟನಾಯಕ	1904–05ನೆ ಬಾಣಾವರ, ಕೆಲೂರು ಮೂಡಿಗೆರೆ ರಸ್ತೆ ರಿಪೇರಿ.	8 11 7
2	ಮುನಿಸಾಮಿ	ಡಿಟೋ	1 4 9
3	ಅಲಸಿಂಗ್ಯಾಚಾರ್ ಮತ್ತು ನರಸಿಂಹಾಚಾರ್.	ಬುಡನೂರು ಕರ ರೆಸ್ಟೋರ್ ಮಾಡಿದ್ದು	3 0 0
4	ಡಿ. ವೆಂಕಟನಾಯಕ	904—05ನೆ ಹಾಸನ, ಚಿಕ್ಕವಗಳೂರು ರಸ್ತೆ ರಿಪೇರಿ	24 11 0

ಎಫ್. ಎ. ಸ್ಟೀಲ್,
ಅಫೀಷಿಯೇಟಿಂಗ್ ಎಗ್ಜಿಕ್ಯೂಟೀವ್ ಇಂಜನಿಯರ್.

ಪೊಲೀಸ್ ಇಲಾಖೆ.

ನೋಟಿಸ್.

ತಾರೀಖು 11ನೆ ಏಪ್ರಿಲ್ 1907.

ತಾರೀಖು 11—4—1907ರಲ್ಲಿ ಬಂದು ನೂರು ರೂಪಾಯಿನ ಮತ್ತು $\frac{T.\ A}{53}$ 00967 (ನೂದರಾಸ್ ಸರ್ಕಲ್) ನಂಬರಿನ ನೋಟು ಒಂದನ್ನು ಚನ್ನಪಟ್ಟಣ ತಾಲ್ಲೂಕು ಶಿರಸ್ತೆದಾರ್ ಹಾಲಿ ಬೆಂಗಳೂರು ತಾಲ್ಲೂಕಿನಲ್ಲಿ ನೀಮ್‌ತಾನ್ ಅಫಿಸರಾಗಿರುವ ನಂ॥ ವೆಂಕಟೇಶಸಾವಿರಾಯರು ಕಳದುಕೊಂಡಿರುತ್ತಾರೆ. ಸದರಿ ನೋಟು ಯಾರಲ್ಲಿ ಕೇರುತ್ತೆ ಮತ್ತು ಅವರಲ್ಲಿ ಹ್ಯಾಗೆ ಬಂತೆಂಬ ಸಂಗತಿ ತಿಳಿಸತಕ್ಕವರಿಗೆ 10 ರೂಪಾಯಿ ಇನಾಂ ಕೊಡುವದಾಗಿ ಸಹಾ ತಿಳಿಸುತ್ತಾರೆ. ನೋಟಿನ ಸಂಬಂಧವಾಗಿ ತಿಳಿದುಬರುವ ಸಂಗತಿ ಬೆಂಗಳೂರು ಡಿಸ್ಟ್ರಿಕ್ಟ್ ಪೊಲೀಸ್ ಸೂಪರಿಂಟೆಂಡೆಂಟರಲ್ಲಿಗೆ ತಿಳಿಯಪಡಿಸತಕ್ಕದ್ದು.

ಎಲ್. ಕೃಷ್ಣರಾವ್,
ಸೂಪರಿಂಟೆಂಡೆಂಟ್, ಬೆಂಗಳೂರು ಡಿಸ್ಟ್ರಿಕ್ಟ್.

ಮೈಸೂರು ಸಿಟಿ ಮ್ಯುನಿಸಿಪಾಲಿಟಿ.

ಇಸ್ತಿಹಾರ್ ತಾರೀಖು 29ನೆ ಮಾರ್ಚ್ 1907.

ಸ್ರ್ 1907ನೆ ಇಸವಿ ಜುಲೈ ಮಾಹೆ ತಾರೀಖು 1ರ ಲಾಗಾಯತು 1908ನೆ ಇಸವಿ ಜೂನ್ ಮಾಹೆ ತಾರೀಖು 30ರ ವರಿಗೆ ಈ ಕೆಳಗಿನ ಎ. ಷೆಡ್ಯೂಲಿನಲ್ಲಿ ನಮೂದಿಸುವ ಮೈಸೂರು ಸಿಟಿಗೆ ಸೇರಿದ ತಮಾಂ ಟೋಲ್ ಗೇಟುಗಳ ಮುಖಾಂತ್ರ ಸಿಟಿ ವಳಕ್ಕೆ ಬರುವ ಗಾಡಿಗಳು, ಜಾನವಾರುಗಳು, ವಗೈರೆಗಳ ಮೇಲೆ ಬಿ. ಷೆಡ್ಯೂಲಿನಲ್ಲಿ ನಮೂದಾಗುವ ವರಪಂತೆ ಸಿಟಿ ಮ್ಯುನಿಸಿಪಲ್

ರೆಗ್ಯುಲೇಷ್ಯ 78 ಮತ್ತು 79ನೆ ಸೆಕ್ಷ್ಯಗಳಲ್ಲಿ ನಮೂದಿಸುವ ಪ್ರತ್ತುಗಳಿಗೆ ವಳಪಡಿಸಿ ಪ್ರತಿ ಬಂದು ಟೋಲ್ ಗೇಟನಲ್ಲಿಯಾಗಲೀ ಅಥವಾ ದರೋಬಸ್ತು ಗೇಟುಗಳಲ್ಲಿಯಾಗಲಿ ಟೋಲುವಸೂಲ್ಮಾಡುವ ಬಾಬನ್ನು 1907ನೆ ಇಸವಿ ಮೇ ತಾರೀಖು 20ನೆ ಮಧ್ಯಾಹ್ನ 1 ಘಂಟೆ ಲಾಗಾಯಿತು ರಂಗಾಚಾರ್ಲು ಯುವರ್ ಮೆಮೋರಿಯಲ್ ಹಾಲಿನಲ್ಲಿ ಪ್ರಸಿಡೆಂಟರವರಿಂದ ಯಾ ಅವರಿಂದ ಸ್ಪೆಷಲ್ಲಾಗಿ ನೇಮಿಸಲ್ಪಟ್ಟ ಇತರ ಆಫಿಸರವರಿಂದ ಬಹಿರಂಗವಾಗಿ ಹರಾಜು ಹಾಕಲ್ಪಡುತ್ತೆ.

2. ಹರಾಜಿನಲ್ಲಿ ಬಾಬನ್ನು ಪಡೆಯುವ ಕಂಟ್ರಾಕ್ಟರು ಬಿ. ಷೆಡ್ಯೂಲಿನಲ್ಲಿ ನಮೂದಾಗುವ ರೇಟಿನಂತೆಯೇ ಗೇಟುಗಳ ಮುಖಾಂತರ ಸಿಟ ವಳಕ್ಕೆ ಬರುವ ಗಾಡಿ ವಗೈರೆಗಳ ಮೇಲೆ ಟೋಲ್ ವಸೂಲ್ಮಾಡಬೇಕು. ಹೆಚ್ಚು ರೇಟನ್ನು ವಸೂಲ್ಮಾಡಕೂಡದು. ಇವಾಯಿ ಪ್ರೆಸಿಡೆಂಟರವರಿಂದ ವಿಧಾಯಕ ಮಾಡಲ್ಪಡುವ ಫಾರಂನಲ್ಲಿ ಕ್ರಮವಾಗಿ ಸಾಲ್ ವಾಹೆ ತಾರೀಖು ನಿತಿ ಟೋಲು ಪಾವತಿ ಮಾಡತಕ್ಕ ಆಸಾಮಿಗಳಿಗೆ ರಸೀದಿ ಕೊಡಬೇಕು.

3. ಎಲ್ಲಾ ದರಕ್ಕಿಂತ ಜಾಸ್ತಿ ದರವನ್ನೇ ಆಗಲಿ ಅಥವಾ ಮತ್ಯಾವ ದರವನ್ನೇ ಆಗಲೀ ಮಂಜೂರು ಮಾಡುವ ಅಧಿಕಾರವು ಪ್ರಸಿಡೆಂಟರವರಲ್ಲಿ ಇರುತ್ತದೆ.

4. ಪ್ರತಿ ತಿಂಗಳು 10ನೆ ತಾರೀಖು ವಳಗಾಗಿ ಹಿಂದಣ ಮಾಹೆಯ ಖಿಸ್ತು ಮೊಬಲಗನ್ನು ಪಾವತಿ ಮಾಡಬೇಕು. ಹರಾಜು ಖೈದಾದ ಕೂಡ್ಲೆ ಬಾಬನ್ನು ಪಡೆಯತಕ್ಕ ಕಂಟ್ರಾಕ್ಟರು ಎರಡು ಮಾಹೆಗಳ ಖಿಸ್ತಿಗೆ ಸಮವಾದ ಮೊಬಲಗನ್ನು ಡಿಪಾಜಿಟ್ ಬಗ್ಗೆ ಹಾಜರ್ಮಾಡಬೇಕು. ಪ್ರರತ್ತುಗಳ ಪ್ರಕಾರ ಕಂಟ್ರಾಕ್ಟ್ ನಡೆದರೆ ಡಿಪಾಜಿಟ್ಟಿನಲ್ಲಿರುವ ಮೊಬಲಗನ್ನು ಆಖೈರು ಎರಡು ಮಾಹೆಗಳ ಖಿಸ್ತು ಬಗ್ಗೆ ಜಮೆಗೆ ತೆಗೆದುಕೊಳ್ಳುತ್ತೆ.

5. ಹರಾಜು ಖೈದಾದಕೂಡ್ಲೆ ಡಿಪಾಜಿಟ್ ಬಗ್ಗೆ ಮೊಬಲಗನ್ನು ಹಾಜರ್ಮಾಡದೆ ಇದ್ದರೆ ಖರ್ಚಿಗೂ ಮತ್ತು ಲುಕ್ಸಾನಿಗೂ ಅವೆಲ್ ಕಂಟ್ರಾಕ್ಟುದಾರನನ್ನು ಗುರಿಪಡಿಸಿ ಪುನಶ್ಚ ಹರಾಜು ಮಾಡಿಸುತ್ತೆ. ಖಿಸ್ತು ಮೊಬಲಗು ವಾಯಿದೆ ವಳಗೆ ಹಾಜರ್ಮಾಡೆಲು ತಪ್ಪಿದರೆ ಡಿಪಾಜಿಟ್ ಮೊಬಲಗನ್ನು ದಂಡವಾಗಿ ತೆಗದುಕ್ಕೊಂಡು ಬಾಬನ್ನು ದುಸರಾ ಹರಾಜು ಮಾಡಿಸಿ ಅದರಲ್ಲಿ ನಷ್ಟವೇನಾದರೂ ಇದಲ್ಲಿ ಆ ನಷ್ಟಕ್ಕೆ ಅವಲ್ ದರಖಾಸ್ತುದಾರನನ್ನು ಗುರಿಪಡಿಸುತ್ತೆ. ಎರಡನೆ ಹರಾಜಿನಲ್ಲಿ ನಫೆ ಬಂದಲ್ಲಿ ಮೊದಲು ದರಖಾಸ್ತುದಾರನಿಗೆ ಸದರಿ ನಫೆಗೆ ಹಕ್ಕು ಇರುವದಿಲ್ಲ.

6. ಪ್ರತಿ ಒಬ್ಬ ಕಂಟ್ರಾಕ್ಟರು ರೋಜೇನ್ನಾ ಟೋಲು ಗೇಟುಗಳ ಮುಖಾಂತ್ರ ಪ್ರವೇಶಮಾಡುವ ತರಹಾವಾರಿ ಗಾಡಿಯಾ ಜಾನವಾರುಗಳು ಇವುಗಳ ಮೇಲೆ ವಸೂಲಾದ ಟೋಲ್ ಯಾನೆ ಸುಂಕ ಇವುಗಳ ತಪ್ಪುಲು ತೋರಿಸುವ ಲೆಕ್ಕವನ್ನು ಪ್ರೆಸಿಡೆಂಟರವರು ವಿಧಾಯಕ ಮಾಡುವ ನಮೂನೆಯಲ್ಲಿಟ್ಟು ಅಂಥಾ ಲೆಕ್ಕವನ್ನು ಕಂಟ್ರಾಕ್ಟರು ಪ್ರತಿ ಮಾಹೆಯಲ್ಲಿಯೂ ಪ್ರೆಸಿಡೆಂಟರವರ ಇನ್ಸ್ಪೆಕ್ಷ್ಯ ಬಗ್ಗೆ ಹಾಜರ್ಮಾಡಬೇಕು. ಇವಾಯಿ ಸಾಯರು ಅಥವಾ ಮ್ಯುನಿಸಿಪಲ್ ಉದ್ಯೋಗಸ್ಥರು ಅಪೇಕ್ಷಿಸಿದಾಗ ಅಂಥಾ ಲೆಕ್ಕಗಳನ್ನು ಅವರ ಇನ್ಸ್ಪೆಕ್ಷ್ಯ ಬಗ್ಗೆ ಹಾಜರ್ಮಾಡುವದಕ್ಕು ಬದ್ಧನಾಗಿರತಕ್ಕದ್ದು.

7. ಪ್ರತಿ ಒಬ್ಬ ಕಂಟ್ರಾಕ್ಟರು ಟೋಲು ಗೇಟುಗಳ ಮುಖಾಂತರ ಬರತಕ್ಕ ಗಾಡಿ ಯಾ ಜಾನುವಾರುಗಳ ತಪ್ಪುಲು ಲೆಕ್ಕವನ್ನು 6ನೆ ಕಲಂನಲ್ಲಿ ನಮೂದಿಸಿರುವಂತೆ, ಇಡತಕ್ಕ ಬಗ್ಗೆ ಆಯಾಯ ಕಂಟ್ರಾಕ್ಟುದಾರನ ಸ್ವಂತ ಖರ್ಚಿನಿಂದ ಪ್ರತಿ ಬಂದು ಟೋಲು ಗೇಟಿನಲ್ಲಿಯೂ, ಬೆಬ್ಬೊಬ್ಬ ಮೆತ್ತಿದ್ದಿಯೆನ್ನು ಇಡುವದಕ್ಕೆ ಬದ್ಧನಾಗಿರತಕ್ಕದ್ದು.

8. ಹಾಲಿ ಇರುವ ಟೋಲು ಗೇಟುಗಳನ್ನು ಮತ್ತು ಮನೆಗಳನ್ನು ಕಂಟ್ರಾಕ್ಟರು ಬಳ್ಳೇ ಸ್ಥಿತಿಯಲ್ಲಿಟ್ಟುಕೊಂಡು ಅವುಗಳನ್ನು ಉಪಯೋಗಮಾಡಿಕೊಳ್ಳಬಹುದು.

9. ಈ ಮೇಲ್ಕಂಡ ಪರತ್ತುಗಳಿಗೆ ವಳಪಟ್ಟು ಕಂಟ್ರಾಕ್ಟು ಬಾಬನ್ನು ಸಲೀಸು ನಡಿಸಿಕ್ಕೊಂಡು ಹೋಗತಕ್ಕ ವಿಚಾರವಲ್ಲಿ ಕಂಟ್ರಾಕ್ಟರು ಪ್ರೆಸಿಡೆಂಟರವರಿಂದ ವಿಧಾಯಕವಾದ ನಮೂನೆಯಲ್ಲಿ ಫಾರಂಕಾಗದದಲ್ಲಿ ರೂಲ್ಸು ಪ್ರಕಾರ ಮುಚ್ಚಳಿಕೆ ಬರೆದುಕೊಡಬೇಕು.

10. ಈ ಕೆಳಗೆ ನಮೂದಾಗುವುಗಳ ಮೇಲೆ ಕಂಟ್ರಾಕ್ಟರು ಟೋಲನ್ನು ವಸೂಲ್ಮಾಡಕೂಡದು:—

1. ಮ್ಯುನಿಸಿಪಾಲಿಟಿಗೆ ತೆರಿಗೆ ಪಾವತಿ ಮಾಡಿ ನಂಬರು ಹಾಕಿಸಿಕ್ಕೊಂಡಿರತಕ್ಕ ಗಾಡಿಗಳು ಅಥವಾ ಕ್ಯಾರೇಜುಗಳನ್ನು, ಮ್ಯುನಿಸಿಪಾಲಿಟಿಯಿಂದ ಪಡದಿರತಕ್ಕ ಪ್ಯಾಸುಗಳನ್ನು ಹಾಜರ್ಮಾಡುವ ಗಾಡಿಗಳು ಅಥವಾ ಜಾನವಾರುಗಳು, ಮತ್ತು ಗವರನ್ಮೆಂಟು ಯಾ ಮ್ಯುನಿಸಿಪಲ್ ಕಾರ್ಯಾಸಿಲಿಗೆ ಸೇರಿದ ಅಥವಾ ಸಾಮಾನು ವಗೈರೆ ಸಾಗಿಸುವದಕ್ಕಾಗಿ ಮೊಕರೂರ್ ಮಾಡಲ್ಪಟ್ಟ ಕ್ಯಾರೇಜುಗಳು, ಗಾಡಿಗಳು ಮತ್ತು ಜಾನವರುಗಳ ಮೇಲೆ ಮತ್ತು ಒಂದು ದಿವಸದಲ್ಲಿ 24 ಘಂಟೆ ಕಾಲದೊಳಗಾಗಿ ಅಂತರೆ ಬಂದು ಮಧ್ಯರಾತ್ರಿಯಿಂದ ಇನ್ನೊಂದು ಮಧ್ಯರಾತ್ರಿಯ ವರಿಗೂ ಯಾವ ಕ್ಯಾರೇಜು ಗಾಡಿ ಅಥವಾ ಜಾನವರುಗಳ ಮೇಲೆಯೇ ಆಗಲಿ ಒಂದುಸಾರಿಗಿಂತಲೂ ಹೆಚ್ಚಾಗಿ ಟೋಲು ವಸೂಲ್ಮಾಡಕೂಡದು.

2. ಟೋಲು ಮುಖಾಂತರ ಬರತಕ್ಕ ಸೈನಿಕರ ವಾಹನಕ್ಕಾಗಿ ಅಥವಾ ಅಂಥಾ ಸೈನಿಕರ ಸಾಮಾನು ವಗೈರೆ ಸಾಗಿಸತಕ್ಕ ಬಗ್ಗೆ ಉಪಯೋಗಿಸುವ ಗಾಡಿ ಅಥವಾ ಜಾನವರುಗಳ ಮೇಲೆ, ಮಿಲಿಟರಿ ಅಥವಾ ಗವರ್ಮೆಂಟ್ ಸ್ಟೋರಿಗೆ ಸಾಗಿಸಲ್ಪಡುವ ಸಾಮಾನುಗಳು ಇರತಕ್ಕ ಗಾಡಿ ಅಥವಾ ಜಾನವರುಗಳ ಮೇಲೆ ಸರ್ಕಾರಿ ಡ್ಯೂಟಿಯ ಮೇಲೆ ಬರತಕ್ಕ ಪೋಲೀಸು ಆಫಿಸರರು, ನೌಕರ ಪೊನೇರು ಮತ್ತು ಅವರಿಗೆ ಸಂಬಂಧಪಟ್ಟ ಜನಗಳು ಮತ್ತು

ಸಾಮಾನುಗಳು ಇರುವ ಅವರ ಕ್ಯಾರೇಜುಗಳು, ಗಾಡಿಗಳು ಮತ್ತು ಜಾನವರುಗಳು ಇವುಗಳ ಮೇಲೆ ಮತ್ತೂ ಅರಮನೆ ಇಲಾಖೆಗೆ ಸೇರಿದ ಗಾಡಿಗಳು ಕ್ಯಾರೇಜುಗಳು, ಜಾನವರುಗಳು ಇವುಗಳ ಮೇಲೆ ಸಹ :—

ಎ. ಷೆಡ್ಯೂಲ್.

ನಂಬರ್.	ರಸ್ತೆಗಳ ಹೆಸರು.	ಉಕ್ಕಡಗಳ ಹೆಸರು.
1	ಲೈವ್ವೆ ಸ್ಟೇರ್ಷ ರಸ್ತೆ ...	ಬಳಗೊಳದ ರಸ್ತೆ ಮತ್ತು ಸಿಕ್ಲೈಕ್ ರಸ್ತೆ ಇವೆರಡು ಜಂಕ್ಷ ಆಗುವ ಸ್ಥಳದಲ್ಲಿರುವ ಉಕ್ಕಡ.
2	ಬಳಗೊಳದ ರಸ್ತೆ ...	ಕೆಂಪನಕಟ್ಟೆ ಉಕ್ಕಡ.
3	ಶ್ರೀರಂಗಪಟ್ಟಣದ ರಸ್ತೆ ...	ಎರಕಟ್ಟೆ ಡಿಟೋ
4	ಬೆಂಗಳೂರು ರಸ್ತೆ ...	ವೀರನಗೆರೆ ಡಿಟೋ
5	ಸಿವಿಟೆರಿ ರಸ್ತೆ ...	ಬಂಗಿ ಸಂತ್ರಿ ಡಿಟೋ
6	ಮಹದೇವಪುರದ ರಸ್ತೆ ...	ಜಲಪುರಿ ಡಿಟೋ
7	ಆಲನಹಳ್ಳಿ ರಸ್ತೆ ...	ಇಟ್ಟಿಗೆ ಗೂಡು ಡಿಟೋ
8	ರೇಸ್‌ಕೋರ್ಸ್ ರಸ್ತೆ ...	ರೋಣಸಂತ್ರಿ ಡಿಟೋ
9	ನಂಜನಗೂಡು ರಸ್ತೆ ...	ನಂಜನಗೂಡು ಡಿಟೋ
10	ಡಿಟೋ ...	ಹಾಲಿ ಉಕ್ಕಡದ ಬಳಿ ವಿಧಾಯಕ ಮಾಡಿರುವಂತೆ ನಾಚನಹಳ್ಳಿ
11	ಫಾನಂದವಾಡಿ ರಸ್ತೆ ...	ಚಟ್ಟನಹಳ್ಳಿ ಉಕ್ಕಡ.
12	ವೈಸರಾಯಿ ರಸ್ತೆ ...	ಹೊಲಗೇರಿ ಡಿಟೋ
13	ಚಾಮರಾಜ ಅಗ್ರಹಾರದ ಹಿಂಭಾಗದ ರಸ್ತೆ.	ಡಿಟೋ
14	ಜೂಬಿಲಿ ರಸ್ತೆ ...	ಕುಕ್ಕನಹಳ್ಳಿ ಉಕ್ಕಡ.
15	ಇಲವಾಲದ ರಸ್ತೆ ...	ಶ್ರೀರಾಂಪೇಟೆ ಡಿಟೋ

ಬಿ. ಷೆಡ್ಯೂಲ್.

ನಂಬರ್.	ತಪ್ಸೀಲು.	ದರ. ರೂ.	ಆ.	ಪೈ.
1	ಸ್ಪ್ರಿಂಗ್ ಇರತಕ್ಕ ಪ್ರತಿ ಬಂದು ನಾಲ್ಕು ಚಕ್ರದ ಕ್ಯಾರೇಜಿಗೆ	0	4	0
2	ಡಿಟೋ ಎರಡು ಚಕ್ರದ ಕ್ಯಾರೇಜಿಗೆ	0	2	0
3	ಮನುಷ್ಯರು ಯಾ ಎತ್ತುಗಳು, ಕುದುರೆಗಳು, ಹೇಸರಕತ್ತೆಗಳು ಇವುಗಳಿಂದ ಎಳೆಯಲ್ಪಟ್ಟ ಭಾರಿ ಗಾಡಿಗಳು ಅಥವಾ ಹ್ಯಾಕ್ನಿ ಗಾಡಿ 1ಕ್ಕೆ.	0	2	0
4	ಡಿಟೋ ಖಾಲಿ ಇರತಕ್ಕ ಪ್ರತಿ ಬಂದು ಗಾಡಿಗೆ ..	0	1	0
5	ಡಿಟೋ ಹೇರು ಹೇರಿಕ್ಕೊಂಡು ಬರತಕ್ಕ ಕೋಣ ಯಾ ಎತ್ತು 1ಕ್ಕೆ ..	0	0	6
6	ಡಿಟೋ ಸವಾರಿ ಅಥವಾ ಹೇರು ಹೇರಿಕ್ಕೊಂಡು ಬರತಕ್ಕ 13 ಹಿಡಿಗಳಿಗಿಂತ ಜಾಸ್ತಿರದ ಕುದುರೆ 1ಕ್ಕೆ.	0	1	0
7	ಹೇರು ಇಲ್ಲದೆ ಅಥವಾ ಸವಾರಿ ಇಲ್ಲದೆ ಬರತಕ್ಕ ಕುದುರೆ 1ಕ್ಕೆ	0	0	6
8	13 ಹಿಡಿಗಳು ಅಥವಾ ಅದಕ್ಕಿಂತ ಕಮ್ಮಿಯಾಗಿರತಕ್ಕ ಸವಾರಿ ಅಥವಾ ಹೇರು ಇರುವ ಕುದರೆ 1ಕ್ಕೆ.	0	0	6
9	ಡಿಟೋ ಆನೆ 1ಕ್ಕೆ	0	8	0
10	ಡಿಟೋ ಒಂಟೆ 1ಕ್ಕೆ	0	1	0

ಜಿ. ಹನುಮಂತರಾವ್, ಫಾರ್ ಪ್ರೆಸಿಡೆಂಟ್.